ಕಂಪ್ಯೂಟರ್ ಶಾಖೆ

ಪ್ರ-72
ಕ್ರ-214

# ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಡಿ.ಎಸ್.ಅರುಣ್ ಇವರ ನಿಯಮ 72ರ ಗಮನ ಸೆಳೆಯುವ ಸೂಚನೆಗೆ ಉತ್ತರ.

ಪ್ರಶ್ನೆ : "ಬೆಂಗಳೂರಿನ ಸಂಚಾರಿ ಪೊಲೀಸರ ಬೇಜವಾಬ್ದಾರಿ ದಂಡ ವಸೂಲಾತಿ ಹಾಗೂ ಬಹಳಷ್ಟು ಸಂಚಾರಿ ಮಾರ್ಗಸೂಚಿಗಳು ವಾಹನ ಸವಾರರಿಗೆ (ಸಾಮಾನ್ಯ) ಜನರಿಗೆ ಸರಿಯಾಗಿ ತಿಳಿಯುತ್ತಿಲ್ಲ ಎನ್ನುವುದರ ಬಗ್ಗೆ."

## ಸರ್ಕಾರದ ಉತ್ತರ

### 1. ದಂಡ ವಸೂಲಾತಿ:

ಮೋಟಾರ್ ವಾಹನ ಕಾಯ್ದೆಗನುಗುಣವಾಗಿ ಸರ್ಕಾರದ ಆದೇಶದನ್ವಯ ಹಾಗೂ ಸಂಚಾರ ನಿರ್ವಹಣೆಯ ಬಗ್ಗೆ ಹಾಗೂ ಸಂಚಾರ ನಿಯಮಗಳನ್ನು ಉಲ್ಲಂಘಿಸುವವರ ವಿರುದ್ಧ ಕೇಂದ್ರ/ರಾಜ್ಯ ಸರ್ಕಾರಗಳು ಹೊರಡಿಸುವ ಆದೇಶ / ಸುತ್ತೋಲೆಗಳಲ್ಲಿನ ನಿರ್ದೇಶನಗಳನ್ವಯ ದಂಡದ ಮೊತ್ತವನ್ನು ಸಂಚಾರ ನಿಯಮ ಉಲ್ಲಂಘಿಸುತ್ತಿರುವವರ ವಿರುದ್ಧ ವಿಧಿಸಲಾಗುತ್ತಿದೆ.

ಬೆಂಗಳೂರು ನಗರ ಸಂಚಾರ ಪೊಲೀಸ್ ವತಿಯಿಂದ ಸಂಚಾರ ನಿಯಮ ಉಲ್ಲಂಘಿಸುವವರ ಚಾಲಕ/ಸವಾರರ ವಿರುದ್ಧ ಪ್ರಕರಣಗಳನ್ನು ಎರಡು ರೀತಿಯಲ್ಲಿ ದಾಖಲಿಸಲಾಗುತ್ತಿದೆ.

1. ವಾಹನ ಸವಾರರನ್ನು ತಡೆದು ಸ್ಥಳದಲ್ಲಿಯೇ ದಂಡ ವಿಧಿಸಿ ಅದನ್ನು ವಸೂಲಿ ಮಾಡಲು ಅಥವಾ ನ್ಯಾಯಾಲಯಕ್ಕೆ ಹಾಜರಾಗಿ ದಂಡ ಕಟ್ಟಲು ಕ್ರಮ ಕೈಗೊಳ್ಳಲಾಗುತ್ತಿದೆ.
2. ವಾಹನ ಚಾಲಕರನ್ನು ಭೌತಿಕವಾಗಿ ತಡೆಯದೆ ಕೆಳಕಂಡಂತೆ ನಿಯಮ ಉಲ್ಲಂಘನೆ ಪ್ರಕರಣಗಳನ್ನು ದಾಖಲಿಸಲಾಗುತ್ತಿದೆ.
   - ಸಂಚಾರ ಕಣ್ಗಾವಲು ಕ್ಯಾಮರಾಗಳ ಮೂಲಕ
   - ಸಂಚಾರ ಪೊಲೀಸರು ಹೊಂದಿರುವ ಡಿಜಿಟಲ್ ಕ್ಯಾಮರಾಗಳ ಮೂಲಕ (ಡಿಜಿಟಲ್ ಎಫ್.ಟಿ.ವಿ.ಆರ್)
   - ಸಾರ್ವಜನಿಕರು ಗಮನಿಸಿದ ಸಂಚಾರ ನಿಯಮ ಉಲ್ಲಂಘನೆಗಳ ದೂರುಗಳನ್ನು ಛಾಯಾ ಚಿತ್ರ ಸಮೇತ 'ಪಬ್ಲಿಕ್ ಐ' ಆ್ಯಪ್ ಮೂಲಕ ಕಳುಹಿಸುತ್ತಿದ್ದು ಅದನ್ನು ಪರಿಶೀಲಿಸಿ ಪ್ರಕರಣ ದಾಖಲಿಸಿಕೊಳ್ಳಲಾಗುತ್ತಿದೆ.
   - ಜೊತೆಗೆ ಜಂಪಿಂಗ್ ಟ್ರಾಫಿಕ್ ಸಿಗ್ನಲ್ ಉಲ್ಲಂಘನೆಗಳನ್ನು ಮತ್ತು ಅತಿ ವೇಗವಾಗಿ ಚಲಿಸಿ ನಿಯಮ ಉಲ್ಲಂಘಿಸುವ ವಾಹನಗಳ ವಿರುದ್ಧ ಸ್ವಯಂಚಾಲಿತವಾಗಿ ಪ್ರಕರಣಗಳನ್ನು ದಾಖಲಿಸಲು ನಗರದ ಪ್ರಮುಖ 10 ಜಂಕ್ಷನ್‌ಗಳಲ್ಲಿ ರೆಡ್ ಲೈಟ್ ವಯಲೇಷನ್ ಡಿಟೆಕ್ಷನ್ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ.

ಎರಡನೇ ರೀತಿಯಲ್ಲಿ ಸಂಚಾರ ನಿಯಮ ಉಲ್ಲಂಘನೆಗಳನ್ನು ದಾಖಲಿಸುವಾಗ ಸಂಚಾರ ಪೊಲೀಸರು ಯಾವುದೇ ವಾಹನ ಸವಾರರನ್ನು / ಚಾಲಕರನ್ನು ಭೌತಿಕವಾಗಿ ತಡೆದು ನಿಲ್ಲಿಸಿ ಪ್ರಕರಣ ದಾಖಲಿಸುವುದಿಲ್ಲ. ಇದರಿಂದ ಅನಗತ್ಯ ಸಂಚಾರ ದಟ್ಟಣೆ ಉಂಟಾಗುವುದು ತಪ್ಪುತ್ತದೆ. ಮತ್ತು ಉಲ್ಲಂಘನೆಗಳಿಗೆ ಐ.ಎಂ.ವಿ ಕಲಂ 133 ನೋಟೀಸ್ ಅನ್ನು ವಾಹನದ ಮಾಲೀಕರಿಗೆ ನೀಡಿ ಅವರಿಂದ ದಂಡವನ್ನು ವಸೂಲಿ ಮಾಡಲಾಗುತ್ತಿದೆ.

- ಸಂಚಾರ ದಟ್ಟಣೆಯನ್ನು ಸರಿಪಡಿಸಿ, ಸುಗಮ ಸಂಚಾರಕ್ಕೆ ಅವಕಾಶ ಮಾಡಿಕೊಡುವುದು ಸಂಚಾರ ಪೊಲೀಸರ ಮೊದಲ ಆದ್ಯತೆ ಆಗಿರುತ್ತದೆ.
- ಸಂಚಾರ ನಿಯಮ ಉಲ್ಲಂಘನೆಗಳನ್ನು ತಡೆಗಟ್ಟಿ ರಸ್ತೆ ಸುರಕ್ಷತೆಯನ್ನು ಹೆಚ್ಚಿಸಿ ಅಪಘಾತಗಳನ್ನು ತಡೆಗಟ್ಟುವುದು ಮತ್ತು ಸಾವು ನೋವುಗಳನ್ನು ಕಡಿಮೆ ಮಾಡುವುದು ಸಂಚಾರ ಪೊಲೀಸರ ಆದ್ಯ ಕರ್ತವ್ಯವು ಆಗಿದೆ.
- ವಾಹನ ದಟ್ಟಣೆಯ ಸಮಯದಲ್ಲಿ ನಿಯಮ ಉಲ್ಲಂಘನೆಗಳಿಗೆ ವಾಹನಗಳನ್ನು ತಡೆಗಟ್ಟಬಾರದೆಂದು ಸೂಚನೆ ನೀಡಲಾಗಿದೆ.

- ❖ ಸಂಪರ್ಕರಹಿತ ನಿಯಮ ಜಾರಿಗೆ ಅಂದರೆ ವಾಹನಗಳನ್ನು ತಡೆಗಟ್ಟದೆ ಉಲ್ಲಂಘನೆಗಳ ಛಾಯಾಚಿತ್ರಗಳನ್ನು ತೆಗೆದು ವಿಶ್ಲೇಷಿಸಿ, ದಂಡ ರಸೀತಿಯನ್ನು ಕಳುಹಿಸುವ ವಿಧಾನಕ್ಕೆ ಹೆಚ್ಚಿನ ಒತ್ತು ನೀಡಲಾಗಿದ್ದು, ಇದರಿಂದ ಸಾರ್ವಜನಿಕರಿಗೆ ಆಗುತ್ತಿದ್ದ ಕಿರಿಕಿರಿಯನ್ನು ತಪ್ಪಿಸಲಾಗಿದೆ. ತಂತ್ರಜ್ಞಾನವನ್ನು ಉಪಯೋಗಿಸಿ ನಿಯಮ ಜಾರಿಗೆ ಹೆಚ್ಚು ಒತ್ತು ನೀಡಲಾಗುತ್ತಿದೆ.
- ❖ ಪ್ರವರ್ತನ ಚಟುವಟಿಕೆಗಳ ಸಂಪರ್ಕ ರಹಿತ ನಿಯಮಜಾರಿ ಸಮಯದಲ್ಲಿ ಎಲ್ಲಿ ಬೇಕಾದರೂ ಬಳಸಲು ಅನುಕೂಲವಾಗುವಂತೆ ಎ.ಎನ್.ಪಿ.ಆರ್ ಕ್ಯಾಮೆರಾವನ್ನು ಪೋರ್ಟಬಲ್ ಟ್ರೈಪಾಡ್, ಬ್ಯಾಟರಿ ಮತ್ತು 4ಜಿ ಮೋಡಮ್‌ನೊಂದಿಗೆ 20 ಸಂಚಾರ ಪೊಲೀಸ್ ಠಾಣೆಗಳಿಗೆ ಹಂಚಿಕೆ ಮಾಡಲಾಗಿದೆ.
- ❖ ಸಿಗ್ನಲ್ ಜಂಪಿಂಗ್ ಮತ್ತು ಲೇನ್ ಡಿಸಿಪ್ಲೀನ್ ಉಲ್ಲಂಘನೆಗಳನ್ನು ಸ್ವಯಂಚಾಲಿತವಾಗಿ ಗುರುತಿಸುವ ಕ್ಷಮತೆಯನ್ನು ಹೊಂದಿರುವ ಆರ್.ಎಲ್.ವಿ.ಡಿ (Red Light Violation Detection) ಕ್ಯಾಮೆರಾಗಳನ್ನು 10 ಜಂಕ್ಷನ್‌ಗಳಲ್ಲಿ ಅಳವಡಿಸಲಾಗಿದೆ.
- ❖ ಬೆಂಗಳೂರು ಸಂಚಾರ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಎಲ್ಲಾ ಅಧಿಕಾರಿ ಸಿಬ್ಬಂದಿಗಳಿಗೂ ಬಾಡಿವೋರ್ನ್ ಕ್ಯಾಮೆರಾಗಳನ್ನು ನೀಡಲು ಉದ್ದೇಶಿಸಲಾಗಿದ್ದು, ಸ್ಮಾರ್ಟ್ ಸಿಟಿ ಯೋಜನೆಯಡಿಯಲ್ಲಿ 1,097 ಸಂಖ್ಯೆ ಬಾಡಿ ವೋರ್ನ್ ಕ್ಯಾಮೆರಾಗಳನ್ನು ಖರೀದಿಸಿ ಬೆಂಗಳೂರು ಸಂಚಾರ ವಿಭಾಗದ ವ್ಯಾಪ್ತಿಯ ಅಧಿಕಾರಿ ಸಿಬ್ಬಂದಿಗಳಿಗೆ ವಿತರಿಸಲಾಗುತ್ತಿದೆ. 1,028 ಬಾಡಿವೋರ್ನ್ ಕ್ಯಾಮೆರಾಗಳನ್ನು ಖರೀದಿಸಲು ಕಾರ್ಯಾದೇಶವನ್ನು ನೀಡಲಾಗಿದ್ದು, ಸದರಿ ಬಾಡಿವೋರ್ನ್ ಕ್ಯಾಮೆರಾ ಲಭ್ಯವಾದ ನಂತರ ಅವುಗಳನ್ನು ಸಹ ಅಧಿಕಾರಿ ಸಿಬ್ಬಂದಿಗಳಿಗೆ ನೀಡಲಾಗುವುದು.
- ❖ ಸಂಚಾರ ನಿಯಮ ಉಲ್ಲಂಘನೆಗಳನ್ನು ತಡೆಗಟ್ಟಿ ರಸ್ತೆ ಸುರಕ್ಷತೆಯನ್ನು ಹೆಚ್ಚಿಸಿ ಅಪಘಾತಗಳನ್ನು ತಡೆಗಟ್ಟುವುದು ಮತ್ತು ಸಾವುನೋವುಗಳನ್ನು ಕಡಿಮೆ ಮಾಡುವುದು ಸಂಚಾರ ಪೊಲೀಸರ ಆದ್ಯ ಕರ್ತವ್ಯವಾಗಿದೆ. ಸಂಚಾರ ನಿಯಮ ಉಲ್ಲಂಘನೆಗಳನ್ನು ದಾಖಲಿಸುವಾಗ ಸಾರ್ವಜನಿಕರಿಗೆ ತೊಂದರೆಯಾಗದಂತೆ ಮತ್ತು ಪಾರದರ್ಶಕತೆ ಕಾಪಾಡಲು ಪೂರ್ವನಿರ್ಧರಿತ ಕಾರ್ಯ ಯೋಜನೆಯನ್ನು ತಯಾರಿಸಿ ಸುತ್ತೋಲೆಯ ಮೂಲಕ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ನಿರ್ದೇಶನ ನೀಡಲಾಗಿದೆ. ಸುತ್ತೋಲೆ ಪ್ರತಿಯನ್ನು ಲಗತ್ತಿಸಿದೆ (ಅನುಬಂಧ-1). ಈ ಸುತ್ತೋಲೆ ಉಲ್ಲಂಘಿಸಿದವರ ವಿರುದ್ಧ ಕ್ರಮ ಕೈಗೊಳ್ಳಲಾಗುತ್ತಿದೆ.

ಮೋಟಾರು ವಾಹನ ಕಾಯ್ದೆಯಲ್ಲಿ ಸರ್ಕಾರ ಆದೇಶಿಸಿರುವ ದಂಡದ ಮೊತ್ತವನ್ನು ಸಂಚಾರ ನಿಯಮ ಉಲ್ಲಂಘಿಸುತ್ತಿರುವವರ ವಿರುದ್ಧ ಹಾಕಲಾಗುತ್ತಿರುತ್ತದೆ. Government Notification No: TD250TDO2019.Bengaluru Date 21.09.2019 ರ ಆದೇಶದಂತೆ ಸರ್ಕಾರ ಪರಿಷ್ಕರಿಸಿ ಹೊರಡಿಸಿದ ಹೊಸ ದಂಡದ ಮೊತ್ತವನ್ನು ಈ ಆದೇಶದ ನಂತರದ ಉಲ್ಲಂಘನೆಗಳಿಗೆ ಸಂಗ್ರಹಿಸಲಾಗುತ್ತಿದೆ. ಸಂಗ್ರಹವಾದ ದಂಡ ಮೊತ್ತವನ್ನು ಸರ್ಕಾರದ ಖಜಾನೆಗೆ ಜಮಾ ಮಾಡಲಾಗುತ್ತಿದೆ.

ಕಳೆದ 3 ವರ್ಷಗಳಲ್ಲಿ ಬೆಂಗಳೂರು ನಗರ ಸಂಚಾರ ಪೊಲೀಸರು ಸಂಚಾರ ನಿಯಮ ಉಲ್ಲಂಘಿಸುವವರ ವಿರುದ್ಧ ದಾಖಲಿಸಿದ ಪ್ರಕರಣಗಳು ಮತ್ತು ಸಂಗ್ರಹಿಸಿದ ದಂಡ ಮೊತ್ತದ ವಿವರ ಈ ಕೆಳಕಂಡಂತಿದೆ.

| ವರ್ಷ | ದಾಖಲಿಸಿದ ಪ್ರಕರಣಗಳು | ಸಂಗ್ರಹಿಸಿದ ದಂಡ ಮೊತ್ತ |
|---|---|---|
| 2019 | 7987919 | 89,18,84,635 |
| 2020 | 8406182 | 99,57,33,010 |
| 2021 | 9358135 | 140,32,90,775 |
| 2022 (ಫೆಬ್ರವರಿ ಮಾಹೆಯ ಅಂತ್ಯದವರೆಗೆ) | 1313554 | 21,91,50,900 |

2. **ಸಂಚಾರ ಮಾರ್ಗಸೂಚಿಗಳು**

ರಸ್ತೆ ಬಳಕೆದಾರರ ಸುರಕ್ಷತೆ ಮತ್ತು ವಾಹನಗಳ ಸುಗಮ ಸಂಚಾರಕ್ಕೆ ಬೆಂಗಳೂರು ನಗರ ರಸ್ತೆಗಳಲ್ಲಿ ಸಂಚಾರ ಮಾರ್ಗಸೂಚಿ ಫಲಕಗಳನ್ನು ಅಂದರೆ ನಿಯಂತ್ರಣ, ಎಚ್ಚರಿಕೆ ಮತ್ತು ಮಾಹಿತಿ ಚಿಹ್ನೆಗಳ ಫಲಕಗಳನ್ನು ವಾಹನ ಸವಾರ/ಚಾಲಕರಿಗೆ ಗೋಚರವಾಗುವಂತೆ ಅಳವಡಿಸಲಾಗಿದೆ.

ನಗರದ ಬಹುತೇಕ ರಸ್ತೆಗಳಲ್ಲಿ ಅಳವಡಿಸಿರುವ ರಸ್ತೆ ಪರಿಕರಗಳು ಮಳೆ, ಬಿಸಿಲು ಮತ್ತು ವಾಹನಗಳು ಉಗುಳುವ ಕಾರ್ಬನ್‌ನಿಂದ ತಮ್ಮ ಮೂಲ ಸ್ವರೂಪವನ್ನು ಕಳೆದುಕೊಂಡಂತ ಸಂದರ್ಭಗಳಲ್ಲಿ ಇಂತಹ ಪರಿಕರಗಳನ್ನು ನೀರಿನಿಂದ ತೊಳೆದು ಅಥವಾ ಇನ್ನಿತರೆ ವಿಧಾನಗಳಿಂದ ಸ್ವಚ್ಛಗೊಳಿಸುವ ಮೂಲಕ ನೈಜ ರೂಪಕ್ಕೆ ತರಲಾಗುತ್ತದೆ. ಸ್ವಚ್ಛಗೊಳಿಸಲು ಸಾಧ್ಯವಾಗದಂತ ಪರಿಕರಗಳನ್ನು ಬದಲಿಸಲಾಗುತ್ತಿದೆ.

ಬೆಂಗಳೂರು ನಗರ ಸಂಚಾರ ವಿಭಾಗಕ್ಕೆ ಅವಶ್ಯವಿದ್ದ ಸೂಚನಾ ಫಲಕ (ನಿಯಂತ್ರಿತ, ಎಚ್ಚರಿಕೆ ಹಾಗೂ ಮಾಹಿತಿ ಚಿಹ್ನೆ) ಗಳ ವಿವರಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ನೀಡಿ ಈ ಫಲಕಗಳನ್ನು ಒದಗಿಸಲು ಲಿಖಿತವಾಗಿ ಮನವಿ ಮಾಡಿಕೊಂಡು ಫಲಕಗಳನ್ನು ಅಳವಡಿಸುವ ಕ್ರಮ ಕೈಗೊಳ್ಳಲಾಗಿದೆ **(ಪತ್ರದ ಪ್ರತಿಯನ್ನು ಅನುಬಂಧ-2 ರಲ್ಲಿ ಲಗತ್ತಿಸಿದೆ)**.

ಅಲ್ಲದೆ, ಸಂಚಾರ ಮಾರ್ಗಸೂಚಿ ಫಲಕಗಳು ನಗರ ವ್ಯಾಪ್ತಿಯಲ್ಲಿ ಹಸಿರು ಬಣ್ಣದಲ್ಲಿದ್ದು ಇವುಗಳನ್ನು ನೀಲಿ ಬಣ್ಣಕ್ಕೆ ಬದಲಾಯಿಸಲು ಸಹ ಮಾರ್ಗಸೂಚಿ ಫಲಕಗಳ ಮಾಹಿತಿಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಮನವಿಯನ್ನು ಸಲ್ಲಿಸಲಾಗಿದೆ **(ಪ್ರತಿಯನ್ನು ಅನುಬಂಧ-3 ರಲ್ಲಿ ಲಗತ್ತಿಸಿದೆ)**.

**<u>ಅರಿವು ಮೂಡಿಸಲು ಕೈಗೊಂಡ ಕ್ರಮಗಳು:</u>**

ಬೆಂಗಳೂರು ನಗರದಲ್ಲಿ ಸಂಚಾರ ಸಮಸ್ಯೆಗಳನ್ನು ಪರಿಹರಿಸಲು ಹಾಗೂ ಸುಗಮ ಸಂಚಾರ ಜಾರಿ ಮಾಡಲು ಮತ್ತು ರಸ್ತೆಯಲ್ಲಿ ಸುರಕ್ಷತೆಯನ್ನು ಜಾರಿ ಮಾಡಲು ಹಲವಾರು ಕ್ರಮಗಳನ್ನು, ಆಂದೋಲನಗಳನ್ನು ಹಾಗೂ ವೃತ್ತಿಪರ ಚಾಲಕರುಗಳಿಗೆ ಹಲವಾರು ತರಬೇತಿ ಹಾಗೂ ರಸ್ತೆ ಸುರಕ್ಷತೆಯ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ನಡೆಸುತ್ತಿದ್ದು ರಸ್ತೆ ಸುರಕ್ಷತೆಯನ್ನು ಅತ್ಯುತ್ತಮ ರೀತಿಯಲ್ಲಿ ಜಾರಿ ಮಾಡಲಾಗಿದೆ.

ಸಾಮಾಜಿಕ ಜಾಲತಾಣಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು, ದೈನಂದಿನ ದಿನಪತ್ರಿಕೆಗಳಲ್ಲಿ ಸಾರ್ವಜನಿಕರಿಗೆ ಅರಿವು ಮೂಡಿಸುವ ಭಿತ್ತಿ ಚಿತ್ರಗಳನ್ನು ಹಾಗೂ ಛಾಯಾ ಚಿತ್ರಗಳನ್ನು ಮುದ್ರಿಸಿ ಮತ್ತು ಆಂದೋಲನಗಳ ಮುಖೇನ ಪಥ ಶಿಸ್ತು ಪಾಲನೆಯ ಗುರಿ ಮತ್ತು ಉದ್ದೇಶಗಳನ್ನು ಸಾರ್ವಜನಿಕರಿಗೆ ಮನದಟ್ಟು ಮಾಡಲಾಗುತ್ತಿದೆ.

ಸಂಚಾರ ನಿರ್ವಹಣಾ ಕೇಂದ್ರದಲ್ಲಿ ಪ್ರತಿದಿನ ವಿದ್ಯಾರ್ಥಿಗಳು, ಪೋಷಕರು, ಆಟೋರಿಕ್ಷಾ, ಕೆಎಸ್‌ಆರ್‌ಟಿಸಿ, ಬಿಎಂಟಿಸಿ ಮತ್ತು ಕ್ಯಾಬ್ ಚಾಲಕರುಗಳು ವೀಕ್ಷಣೆಗೆ ಬರುತ್ತಿದ್ದು ಅವರುಗಳಿಗೆ ಪಥ ಶಿಸ್ತು ಪಾಲನೆಯ ಬಗ್ಗೆ ವಿಡಿಯೋ ತುಣುಕುಗಳನ್ನು ತೋರಿಸುವುದರ ಮೂಲಕ ಹಾಗೂ ಉಪನ್ಯಾಸಗಳ ಮೂಲಕ ಜಾಗೃತಿ ಮೂಡಿಸಲಾಗುತ್ತಿದೆ.

ಬೆಂಗಳೂರು ನಗರದ ಥಣಿಸಂದ್ರದಲ್ಲಿರುವ ಸಂಚಾರ ತರಬೇತಿ ಮತ್ತು ರಸ್ತೆ ಸುರಕ್ಷತಾ ಸಂಸ್ಥೆಯಲ್ಲಿ ಸಹ ವೃತ್ತಿಪರ ಚಾಲಕರುಗಳಿಗೆ ಹಾಗೂ ಶಾಲಾ ವಾಹನಗಳ ಚಾಲಕರಿಗೆ ವಿಶೇಷವಾದ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ತನ್ಮೂಲಕ ಅರಿವು ಮೂಡಿಸುವ ಉದ್ದೇಶವನ್ನು ಸಫಲಗೊಳಿಸಲಾಗುತ್ತಿದೆ.

ದೇಶದಲ್ಲೇ ಪ್ರಥಮ ಎನ್ನಬಹುದಾದ ಟ್ರಾಫಿಕ್ ಪಾರ್ಕ್‌ಅನ್ನು ನಗರದ ಹೃದಯ ಭಾಗದಲ್ಲಿ ಸ್ಥಾಪಿಸಿದ್ದು, ಈ ಪಾರ್ಕಿನಲ್ಲಿ ಬೆಂಗಳೂರು ನಗರ ಸಂಚಾರ ಪೊಲೀಸ್ ವತಿಯಿಂದ ವಿದ್ಯಾರ್ಥಿಗಳಿಗೆ ಮೂಲಭೂತ ರಸ್ತೆ ಸುರಕ್ಷತಾ ನಿಯಮಗಳನ್ನು ಪ್ರಾಯೋಗಿಕವಾಗಿ ಬೋಧಿಸಲಾಗುತ್ತಿದೆ. ಈಗಾಗಲೇ ಸಾವಿರಾರು ಪ್ರಾಥಮಿಕ ಹಾಗೂ ಪ್ರೌಢಶಾಲಾ ವಿದ್ಯಾರ್ಥಿಗಳು ಇದರ ಲಾಭವನ್ನು ಪಡೆದಿರುತ್ತಾರೆ.

ರಸ್ತೆಯನ್ನು ಬಳಸುವವರು ರಸ್ತೆಯಲ್ಲಿ ಸುರಕ್ಷತೆ ಹಾಗೂ ರಕ್ಷಣಾತ್ಮಕ ರಸ್ತೆ ಬಳಕೆ ಗುಣವನ್ನು ಅಭಿವೃದ್ಧಿಪಡಿಸಲು ಹಾಗೂ ರಸ್ತೆ ಅಪಾಯಗಳು, ರಸ್ತೆ ಬಳಕೆಯ ಮೂಲಭೂತ ನಿಯಮಗಳ ಬಗ್ಗೆ ಮಕ್ಕಳಿಗೆ ಶಿಕ್ಷಣ ನೀಡುವ ಉದ್ದೇಶದಿಂದ SARS (ಸ್ಟೂಡೆಂಟ್ಸ್ ಅಸೋಸಿಯೇಷನ್ ಫಾರ್ ರೋಡ್ ಸೇಫ್ಟಿ) ಯೋಜನೆ ಅಡಿಯಲ್ಲಿ ಸಂಚಾರ ಪೊಲೀಸ್ ಅಧಿಕಾರಿಗಳು ತಮ್ಮ ವ್ಯಾಪ್ತಿಗೆ ಬರುವ ಶಾಲೆಗಳಿಗೆ ಭೇಟಿ ನೀಡಿ ಶಾಲೆಯ ಮುಖ್ಯೋಪಾಧ್ಯಾಯರು / ಪ್ರಾಚಾರ್ಯರನ್ನು ಸಂಪರ್ಕಿಸಿ ಯೋಜನೆಯ ಉದ್ದೇಶವನ್ನು ತಿಳಿಸಿ ಸಂಚಾರ ತರಬೇತಿಗೆ ವಿದ್ಯಾರ್ಥಿಗಳನ್ನು ನೊಂದಾಯಿಸಿಕೊಂಡು ಅವರುಗಳಿಗೆ ಪಾದಚಾರಿಗಳು ಮತ್ತು ವಾಹನ ಚಾಲಕರಂತಹ ರಸ್ತೆ ಬಳಕೆದಾರರಿಗೆ ರಸ್ತೆ ಸುರಕ್ಷತಾ ಜಾಗೃತಿ ಕುರಿತು ತರಬೇತಿ ನೀಡಲಾಗುತ್ತಿದೆ.

---

**ಹೆಚ್.ಡಿ/186/ಎಸ್.ಎಸ್.ಟಿ./2022**

**(ಆರಗ ಜ್ಞಾನೇಂದ್ರ)**
**ಗೃಹ ಸಚಿವರು**

ಸಂಖ್ಯೆ:ಸೂಚನಾ ಫಲಕ/ಜೆಸಿಪಿ(ಸಂ)/2021

ಬೆಂಗಳೂರು ನಗರ
ಸಂಚಾರ ಪೊಲೀಸ್

ಜಂಟಿ ಪೊಲೀಸ್ ಆಯುಕ್ತರವರ ಕಛೇರಿ,
ಸಂಚಾರ, ನಂ.5, ಇನ್‌ಫೆಂಟ್ರಿ ರಸ್ತೆ,
ಬೆಂಗಳೂರು ನಗರ.
ದಿನಾಂಕ: 15ನೇ ಮೇ 2021.

ರವರಿಗೆ,

ಆಯುಕ್ತರು,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಎನ್.ಆರ್. ಚೌಕ,
ಬೆಂಗಳೂರು ನಗರ.

ಮಾನ್ಯರೆ,

ವಿಷಯ: ಹಸಿರು ಬಣ್ಣದಲ್ಲಿದ್ದು ನೀಲಿ ಬಣ್ಣಕ್ಕೆ ಬದಲಾಯಿಸಬೇಕಾಗಿರುವ ಡೈರೆಕ್ಷನ್ ಬೋರ್ಡ್‌ಗಳ ಮಾಹಿತಿಯನ್ನು ಒದಗಿಸುವ ಬಗ್ಗೆ.

ಉಲ್ಲೇಖ: ಈ ಕಛೇರಿ ಪತ್ರ ಸಮಸಂಖ್ಯೆ ದಿನಾಂಕ: 10-05-2021

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಬೆಂಗಳೂರು ನಗರ ವ್ಯಾಪ್ತಿಯ ರಸ್ತೆಗಳಲ್ಲಿ ಅಳವಡಿಸಬೇಕಾಗಿರುವ ನಿಯಂತ್ರಣ, ಎಚ್ಚರಿಕೆ ಮತ್ತು ಮಾಹಿತಿ ಚಿಹ್ನೆಗಳ ಫಲಕಗಳ ಬಗ್ಗೆ ಮಾಹಿತಿಯನ್ನು ದಿನಾಂಕ: 10-05-2021 ರಂದು ಈ ಕಛೇರಿಯಿಂದ ಒದಗಿಸಲಾಗಿತ್ತು. ಮುಂದುವರೆದಂತೆ ನಗರ ವ್ಯಾಪ್ತಿಯಲ್ಲಿ ಹಸಿರು ಬಣ್ಣದಲ್ಲಿದ್ದು ನೀಲಿ ಬಣ್ಣಕ್ಕೆ ಬದಲಾಯಿಸಬೇಕಾಗಿರುವ ಡೈರೆಕ್ಷನ್ ಬೋರ್ಡ್‌ಗಳ ಮಾಹಿತಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಿಕೊಡಲಾಗಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

(ಡಾ. ಬಿ.ಆರ್. ರವಿಕಾಂತೇಗೌಡ)
ಜಂಟಿ ಪೊಲೀಸ್ ಆಯುಕ್ತರು,
ಸಂಚಾರ, ಬೆಂಗಳೂರು ನಗರ.

<u>ಪ್ರತಿಯನ್ನು ಮಾಹಿತಿಗಾಗಿ</u>: ಮುಖ್ಯ ಅಭಿಯಂತರರು, ಸಂಚಾರ ತಾಂತ್ರಿಕ ಕೋಶ, ಬಿಬಿಎಂಪಿ, ಬೆಂಗಳೂರು ನಗರ.

## ಬೆಂಗಳೂರು ನಗರ ವ್ಯಾಪ್ತಿಯ ರಸ್ತೆಗಳಲ್ಲಿ ಹಸಿರು ಬಣ್ಣದಿಂದ ಕೂಡಿ ನೀಲಿ ಬಣ್ಣಕ್ಕೆ ಬದಲಾಯಿಸ ಬೇಕಾಗಿರುವ ದಿಕ್ಕು ಸೂಚಿಸುವ ಫಲಕಗಳನ ವಿವರ

| ಸಂಚಾರ ಪೊಲೀಸ್ ಠಾಣೆ | ರಸ್ತೆಯ ಹೆಸರು | ಸ್ಥಳ | | ಷರಾ |
|---|---|---|---|---|
| ಕಬ್ಬನ್ ಪಾರ್ಕ್ | ಅಂಬೇಡ್ಕರ್ ರಸ್ತೆ | 1 | ಗೋಪಾಲಗೌಡ ವೃತ್ತ | |
| | ಅಂಬೇಡ್ಕರ್ ರಸ್ತೆ | 2 | ಪೊಲೀಸ್ ತಿಮ್ಮಯ್ಯ ವೃತ್ತ | |
| | ಅಂಬೇಡ್ಕರ್ ರಸ್ತೆ | 3 | ಕಾಫಿ ಬೋರ್ಡ್ ಜಂಕ್ಷನ್ | |
| | ಅಂಬೇಡ್ಕರ್ ರಸ್ತೆ | 4 | ಬಾಳೇಕುಂದ್ರಿ ವೃತ್ತ | |
| | ಕ್ವೀನ್ಸ್ ರಸ್ತೆ | 5 | ಟ್ರಾಫಿಕ್ ಹೆಡ್ ಕ್ವಾರ್ಟರ್ ಜಂಕ್ಷನ್ | |
| | ಕ್ವೀನ್ಸ್ ರಸ್ತೆ | 6 | ಸಿ.ಟಿ.ಓ. ವೃತ್ತ | |
| | ರಾಜಭವನ ರಸ್ತೆ | 7 | ಪೊಲೀಸ್ ತಿಮ್ಮಯ್ಯ ವೃತ್ತ | |
| | ಕಸ್ತೂರಿಬಾ ರಸ್ತೆ – ಎಂ.ಜಿ.ರಸ್ತೆ | 8 | ಸಿದ್ದಲಿಂಗಯ್ಯ ವೃತ್ತ | |
| | ಎಂ.ಜಿ.ರಸ್ತೆ | 9 | ಅನಿಲ್ ಕುಂಬ್ಳೆ ವೃತ್ತ | |
| | ಪ್ಯಾಲೇಸ್ ರಸ್ತೆ | 10 | ಸಿ.ಐ.ಡಿ. ಜಂಕ್ಷನ್ | |
| | ಡಿ.ದೇವರಾಜು ಅರಸ್ ರಸ್ತೆ | 11 | ಎ.ಜಿ.ಎಸ್. ಜಂಕ್ಷನ್ | |
| ಸದಾಶಿವನಗರ | ಸರ್.ಸಿ.ವಿ.ರಾಮನ್ ರಸ್ತೆ | 12 | ಮೇಕ್ರಿ ವೃತ್ತ | |
| | ಟಿ.ಚೌಡಯ್ಯ ರಸ್ತೆ | 13 | ಭಾಷ್ಯಂ ವೃತ್ತ | |
| | ನ್ಯೂ ಬಿ.ಇ.ಎಲ್ ರಸ್ತೆ | 14 | ಎಂ.ಎಸ್.ರಾಮಯ್ಯ ಜಂಕ್ಷನ್ | |
| | ನ್ಯೂ ಬಿ.ಇ.ಎಲ್ ರಸ್ತೆ | 15 | ಇಸ್ರೋ ಜಂಕ್ಷನ್ | |
| | ನ್ಯೂ ಬಿ.ಇ.ಎಲ್ ರಸ್ತೆ | 16 | ದೇವಸಂದ್ರ ಜಂಕ್ಷನ್ | |
| ಹೈಗ್ರೌಂಡ್ಸ್ | ಮಿಲ್ಲರ್ಸ್ ರಸ್ತೆ | 17 | ಓಲ್ಡ್ ಉದಯ ಟಿ.ವಿ ಜಂಕ್ಷನ್ ಮುಂಭಾಗ | |
| | ಪ್ಯಾಲೇಸ್ ರಸ್ತೆ | 18 | ಬಸವೇಶ್ವರ ಸರ್ಕಲ್ | |
| | ಪಿ.ಎಫ್ ರಸ್ತೆ | 19 | ಕೆ.ಎಫ್.ಎಂ ಜಂಕ್ಷನ್ | |
| | ಕೆ.ಕೆ ರಸ್ತೆ | 20 | ಶಿವಾನಂದ ಜಂಕ್ಷನ್ | |
| | ಸ್ಯಾಂಕಿ ರಸ್ತೆ | 21 | ವಿಂಡ್ಸರ್ ಮ್ಯಾನರ್ ಜಂಕ್ಷನ್ | |
| | ಕನ್ನಿಂಗ್ ಹ್ಯಾಮ್ ರಸ್ತೆ | 22 | ಚಂದ್ರಿಕ ಜಂಕ್ಷನ್ | |
| | ಶೇಷಾದ್ರಿಪುರಂ 1ನೇ ಮುಖ್ಯ ರಸ್ತೆ | 23 | ಆರ್.ಎಂ.ಎಸ್ ಜಂಕ್ಷನ್ | |
| | ಲಿಂಕ್ ರಸ್ತೆ | 24 | ಗೀತಾಂಜಲಿ | |
| | ಪ್ಯಾಲೇಸ್ ರಸ್ತೆ | 25 | ಓಲ್ಡ್ ಹೈಗ್ರೌಂಡ್ ಜಂಕ್ಷನ್ | |
| | ಪ್ಯಾಲೇಸ್ ರಸ್ತೆ | 26 | ವಸಂತನಗರ ಕೆಳ ಸೇತುವೆ | |
| | ಎಸ್.ಸಿ.ರಸ್ತೆ | 27 | ಶೇಷಾದ್ರಿಪುರಂ ಪೊಲೀಸ್ ಠಾಣೆ ಜಂಕ್ಷನ್ | |
| ಹಲಸೂರುಗೇಟ್ | ನೃಪತುಂಗ ರಸ್ತೆ | 28 | ಪೊಲೀಸ್ ಕಾರ್ನರ್ | |

| | | | | |
|---|---|---|---|---|
| | ದೇವಾಂಗ ರಸ್ತೆ | 29 | ಹಡ್ಸನ್ ವೃತ್ತ | |
| | ಎನ್.ಆರ್.ರಸ್ತೆ | 30 | ಹಡ್ಸನ್ ವೃತ್ತ | |
| | ಎಸ್.ಜೆ.ಪಿ ರಸ್ತೆ | 31 | ಟೌನ್‌ಹಾಲ್ | |
| | ಎನ್.ಆರ್.ರಸ್ತೆ | 32 | ಎಸ್.ಆರ್.ಜಂಕ್ಷನ್ | |
| | ಲಾಲ್‌ಭಾಗ್ ರಸ್ತೆ | 33 | ಪೂರ್ಣಿಮಾ ಜಂಕ್ಷನ್ | |
| | ಪಿ.ಕಾಳಿಂಗರಾವ್ ರಸ್ತೆ | 34 | ದೇವಾಂಗ ಜಂಕ್ಷನ್ | |
| | ಜೆ.ಸಿ.ರಸ್ತೆ | 35 | ಶಿವಾಜಿ ಜಂಕ್ಷನ್ | |
| | ನ್ಯೂ ಮಿಷನ್ ರಸ್ತೆ | 36 | ಶಿವಾಜಿ ಜಂಕ್ಷನ್ | |
| | ಜೆ.ಸಿ.ರಸ್ತೆ | 37 | ಟೌನ್‌ಹಾಲ್ | |
| | ಎಸ್.ಜೆ.ಪಿ. ರಸ್ತೆ | 38 | ಟೌನ್‌ಹಾಲ್ | |
| | ಕೆ.ಜಿ.ರಸ್ತೆ | 39 | ಮೈಸೂರು ಬ್ಯಾಂಕ್ ವೃತ್ತ | |
| | ಎನ್.ಆರ್.ರಸ್ತೆ | 40 | ಪಿ.ಎಸ್.ಜಂಕ್ಷನ್ | |
| ಅಶೋಕನಗರ | ರಿಚ್‌ಮಂಡ್ ರಸ್ತೆ | 41 | ಅಶೋಕನಗರ ಸಿಗ್ನಲ್ ಲೈಟ್ ಜಂಕ್ಷನ್. | |
| | ಹೊಸೂರು ರಸ್ತೆ | 42 | ಜಾನ್ಸನ್ ಮಾರ್ಕೆಟ್ ಜಂಕ್ಷನ್ | |
| | ಹೊಸೂರು ರಸ್ತೆ | 43 | ಸಿ.ಎಂ.ಪಿ ಜಂಕ್ಷನ್ | |
| | ಹೊಸೂರು ರಸ್ತೆ | 44 | ಅಡೇಪಾಳ್ಯ ಜಂಕ್ಷನ್ | |
| | ಹೊಸೂರು ರಸ್ತೆ | 45 | ನಂಜಪ್ಪ ಜಂಕ್ಷನ್ | |
| | ರಿಚ್‌ಮಂಡ್ ರಸ್ತೆ | 46 | ರಿಚ್ಮಂಡ್ ಜಂಕ್ಷನ್ | |
| | ರೆಸಿಡೆನ್ಸಿ ರಸ್ತೆ | 47 | ಕ್ಯಾಷಫಾರ್ಮಸಿ ಜಂಕ್ಷನ್ | |
| | ರೆಸಿಡೆನ್ಸಿ ರಸ್ತೆ | 48 | ಆಶಿರ್ವಾದಂ ಜಂಕ್ಷನ್ | |
| | ಮ್ಯೂಸಿಯಂ ರಸ್ತೆ | 49 | ಓಲ್ಡ್ ಪಿ.ಎಸ್. ಜಂಕ್ಷನ್ | |
| | ಬ್ರಿಗೇಡ್ ರಸ್ತೆ | 50 | ಅಪೇರಾ ಜಂಕ್ಷನ್ | |
| | ಎಂ.ಜಿ.ರಸ್ತೆ | 51 | ಕಾವೇರಿ ಎಂಪೋರಿಯಂ ಜಂಕ್ಷನ್ | |
| | ಎಂ.ಜಿ.ರಸ್ತೆ | 52 | ಮೇಯೋ ಹಾಲ್ ಜಂಕ್ಷನ್ | |
| | ಮ್ಯಾಗರತ್ ರಸ್ತೆ | 53 | ಗರುಡಾ ಮಾಲ್ ಜಂಕ್ಷನ್ | |
| | ರಿಚ್‌ಮಂಡ್ ರಸ್ತೆ | 54 | ಡಿಸೋಜಾ ಜಂಕ್ಷನ್ | |
| | ರಿಚ್‌ಮಂಡ್ ರಸ್ತೆ | 55 | ಮದರ್ ತೇರೆಸ್ಸಾ ಜಂಕ್ಷನ್ | |
| | ಮದರ್ ತೆರೆಸಾ ರಸ್ತೆ | 56 | ಕ್ಯಾಂಬೇಲ್ ಜಂಕ್ಷನ್ | |
| | ಲೋಯರ್ ಅಗರಮ ರಸ್ತೆ | 57 | ಬುಚರಿ ಜಂಕ್ಷನ್ | |
| | ಒ.ಎ. ವರ್ಮಾಲ ರಸ್ತೆ | 58 | ಶ್ರೀನಿವಾಗಿಲು ಜಂಕ್ಷನ್ | |
| | ಓ.ಆರ್.ಸಿ ರಸ್ತೆ | 59 | ಅಂಬೇಡ್ಕರ್ ಜಂಕ್ಷನ್ | |
| | ಲೋಯರ್ ಅಗರಮ ರಸ್ತೆ | 60 | ಓ.ಆರ್.ಸಿ. ಜಂಕ್ಷನ್ | |
| ವಿಲ್ಸನ್‌ಗಾರ್ಡನ್ | ಕೆ.ಹೆಚ್.ರಸ್ತೆ | 61 | ಕೆ.ಹೆಚ್.ಜಂಕ್ಷನ್ | |

| | | | | |
|---|---|---|---|---|
| | ಕೆ.ಹೆಚ್.ರಸ್ತೆ | 62 | ಬಿಎಂಟಿಸಿ ಜಂಕ್ಷನ್ | |
| | ಲಾಲ್‌ಭಾಗ್ ರಸ್ತೆ | 63 | ಊರ್ವಶಿ ಜಂಕ್ಷನ್ | |
| | ಲಾಲ್‌ಭಾಗ್‌ರಸ್ತೆ | 64 | ಪೂರ್ಣಿಮ ಜಂಕ್ಷನ್ | |
| | ಡಾ//ಮರಿಗೌಡ ರಸ್ತೆ | 65 | 10ನೇ ಕ್ರಾಸ್ | |
| ಜೆ.ಬಿ. ನಗರ | ಹಳೇ ಮದ್ರಾಸ್‌ರಸ್ತೆ | 66 | ಎನ್.ಜಿ.ಇ.ಎಫ್‌ಜಂಕ್ಷನ್ | |
| | ಹಳೇ ಮದ್ರಾಸ್‌ರಸ್ತೆ | 67 | ಬಿಗ್ ಬಜಾರ್‌ಜಂಕ್ಷನ್ | |
| | ಸುರಂಜನ್‌ದಾಸ್‌ರಸ್ತೆ | 68 | ಬಿ.ಇ.ಎಂ.ಎಲ್‌ಜಂಕ್ಷನ್ | |
| | ಹಳೇ ವಿಮಾನ ನಿಲ್ದಾಣರಸ್ತೆ | 69 | ಇಸ್ರೋಜಂಕ್ಷನ್ | ಪ್ರಸ್ತುತ ಸಿಗ್ನಲ್ ಫ್ರೀಕಾರಿಡಾರ್ ಅಡಿಯಲ್ಲಿ ಅಂಡರ್‌ಪಾಸ್ ಕಾಮಗಾರಿ ನಡೆಯುತ್ತಿರುತ್ತದೆ. |
| | ಹಳೇ ವಿಮಾನ ನಿಲ್ದಾಣರಸ್ತೆ | 70 | ಮಣಿಪಾಲ್‌ಆಸ್ಪತ್ರೆಜಂಕ್ಷನ್ | |
| | ಇಂದಿರಾನಗರ 80 ಅಡಿ ರಸ್ತೆ | 71 | ಬಿ.ಎಸ್.ಎನ್.ಎಲ್‌ಜಂಕ್ಷನ್ | |
| | ಇಂದಿರಾನಗರ 80 ಅಡಿ ರಸ್ತೆ | 72 | ತಿಪ್ಪಸಂದ್ರಜಂಕ್ಷನ್ | |
| ಪುಲಕೇಶಿನಗರ | ಹೆಣ್ಣೂರು ಮುಖ್ಯ ರಸ್ತೆ | 73 | ಹೆಚ್.ಎಂ ರಸ್ತೆ ಡೇವಿಸ್ ರಸ್ತೆ ಜಂ. | |
| | ಟ್ಯಾನರಿ ರಸ್ತೆ | 74 | ಪಾಟರಿ ಸರ್ಕಲ್ ಬಳಿ | |
| | ಸೆಂಟ್ ಜಾನ್ ಚರ್ಚ್ ರಸ್ತೆ | 75 | ಹೈನ್ಸ್ ಜಂಕ್ಷನ್ | |
| | ಸೆಂಟ್ ಜಾನ್ ಚರ್ಚ್ ರಸ್ತೆ | 76 | ಕೋಲ್ಸ್ ಪಾರ್ಕ್ ಬಳಿ | |
| | ಸೆಂಟ್ ಜಾನ್ ಚರ್ಚ್ ರಸ್ತೆ | 77 | ನಾಗಾಸ್ ಜಂಕ್ಷನ್ | |
| | ಪ್ರಾಮಿನಂಡ್ ರಸ್ತೆ | 78 | ಥಾಮಸ್ ಬೇಕರಿ | |
| | ಸೆಂಟ್ ಜಾನ್ ಚರ್ಚ್ ರಸ್ತೆ | 79 | ಥಾಮಸ್ ಕೆಫೆ | |
| | ವೀಲರ್ ರಸ್ತೆ | 80 | ಸಿಂಧಿ ಕಾಲೋನಿ | |
| ಕೆ.ಜಿ. ಹಳ್ಳಿ | ನಾಗವಾರ ಮುಖ್ಯರಸ್ತೆ | 81 | ಗೋವಿಂದ ಪುರಜಂಕ್ಷನ್ | |
| ಹಲಸೂರು | ಇಂದಿರಾನಗರ ಡಬಲ್ ರಸ್ತೆ | 82 | ಇ.ಎಸ್.ಐ. ಜಂಕ್ಷನ್ | |
| | ಇಂದಿರಾನಗರ 100 ಅಡಿರಸ್ತೆ | 83 | ಬಿ.ಎಂ.ಶ್ರೀ. ಜಂಕ್ಷನ್ | |
| | ಇಂದಿರಾನಗರ 80 ಅಡಿರಸ್ತೆ | 84 | ಸಿ.ಎಂ.ಹೆಚ್. ಜಂಕ್ಷನ್ | |
| | ಒ.ಎಂ.ರಸ್ತೆ | 85 | ಒ.ಎಂ.ರಸ್ತೆ & 80 ಅಡಿ ರಸ್ತೆ ಜಂ. | |
| | ಸ್ವಾಮಿ ವಿವೇಕಾನಂದ ರಸ್ತೆ | 86 | ಕಾಮಧೇನು ಜಂಕ್ಷನ್ | |
| | ಹೆಚ್.ಎ.ಎಲ್. ವಿಮಾನ ನಿಲ್ದಾಣ ರಸ್ತೆ | 87 | ಸಿ.ಬಿ.ರಸ್ತೆ ಜಂಕ್ಷನ್ | |
| | ಹೆಚ್.ಎ.ಎಲ್. ವಿಮಾನ ನಿಲ್ದಾಣ ರಸ್ತೆ | 88 | ದೊಮ್ಮಲೂರು ಅರಳಿಕಟ್ಟೆ ಜಂಕ್ಷನ್ | |
| | ಹೆಚ್.ಎ.ಎಲ್. ವಿಮಾನ ನಿಲ್ದಾಣ ರಸ್ತೆ | 89 | ದೊಮ್ಮಲೂರು ವಾಟರ್ ಟ್ಯಾಂಕ್ ಜಂಕ್ಷನ್ | |
| | ಹೆಚ್.ಎ.ಎಲ್. ವಿಮಾನ ನಿಲ್ದಾಣ ರಸ್ತೆ | 90 | ಎ.ಎಸ್.ಸಿ. ಸೆಂಟರ್ | |
| | ಎಂ.ಜಿ.ರಸ್ತೆ | 91 | ವೆಬ್ಸ್ ಜಂಕ್ಷನ್ | |

| | | | | |
|---|---|---|---|---|
| | ಆರ್.ಎಂ.ರಸ್ತೆ | 92 | ಆರ್.ಎಂ.ರಸ್ತೆ ಜಂಕ್ಷನ್ | |
| | ಡಿಕನ್ಸನ್ ರಸ್ತೆ | 93 | ಮಣಿಪಾಲ್ ಸೆಂಟರ್ ಜಂಕ್ಷನ್ | |
| | ಡಿಕನ್ಸನ್ ರಸ್ತೆ | 94 | ಹಲಸೂರು ರಸ್ತೆ ಡಿಕನ್ಸನ್ ರಸ್ತೆ ಜಂಕ್ಷನ್ | |
| | ವಿಕ್ಟೋರಿಯಾ ರಸ್ತೆ | 95 | ಇಂಡಿಯಾ ಗ್ಯಾರೇಜ್ ಜಂಕ್ಷನ್ | |
| | ಆರ್.ಎಂ.ರಸ್ತೆ | 96 | ಹಾಸ್‌ಮ್ಯಾಟ್ ಜಂಕ್ಷನ್ | |
| | ಭಾಸ್ಕರನ್ ರಸ್ತೆ | 97 | ಬೇಗಂ ಮಹಲ್ ಜಂಕ್ಷನ್ | |
| | ಒ.ಎಂ.ರಸ್ತೆ | 98 | ಒ.ಎಂ.ರಸ್ತೆ ಡಬಲ್ ರಸ್ತೆ ಜಂಕ್ಷನ್ | |
| | ಒ.ಎಂ.ರಸ್ತೆ | 99 | ತಾಮರೀ ಕಣ್ವನ್ ಜಂಕ್ಷನ್ | |
| | ಸ್ವಾಮಿ ವಿವೇಕಾನಂದ ರಸ್ತೆ | 100 | ರಾಮಯ್ಯ ಜಂಕ್ಷನ್ | |
| | ಸ್ವಾಮಿ ವಿವೇಕಾನಂದ ರಸ್ತೆ | 101 | ಆದರ್ಶ ಜಂಕ್ಷನ್ | |
| | ಸಿ.ಎಂ.ಹೆಚ್.ರಸ್ತೆ | 102 | ಶಾಂತಿಸಾಗರ್ ಜಂಕ್ಷನ್ | |
| ಹೆಚ್.ಎ.ಎಲ್. ಏರ್‌ಪೋರ್ಟ್ | ವರ್ತೂರು ಮುಖ್ಯರಸ್ತೆ | 103 | ಸುರಂಜನ್‌ದಾಸ್ ರೋಡ್‌ಜಂಕ್ಷನ್ | |
| | ವರ್ತೂರು ಮುಖ್ಯರಸ್ತೆ | 104 | ಯಮಲೂರುಜಂಕ್ಷನ್ | |
| | ವರ್ತೂರು ಮುಖ್ಯರಸ್ತೆ | 105 | ಮಾರತ್ತಹಳ್ಳಿ ಬ್ರಿಡ್ಜ್ | |
| | ವರ್ತೂರು ಮುಖ್ಯರಸ್ತೆ | 106 | ಕುಂದಲಹಳ್ಳಿ ಜಂಕ್ಷನ್ | |
| | ಹೊರವರ್ತೂಲ ರಸ್ತೆ | 107 | ಕಾಡುಬೀಸನಹಳ್ಳಿ | |
| | ಹೊರವರ್ತೂಲ ರಸ್ತೆ | 108 | ಕಂಟ್ರಿಕ್ಲಬ್‌ಜಂಕ್ಷನ್ | |
| | ಹೊರವರ್ತೂಲ ರಸ್ತೆ | 109 | ಮಲ್ಟಿಪ್ಲೆಕ್ಸ್ | |
| | ಹೊರವರ್ತೂಲ ರಸ್ತೆ | 110 | ಕಾರ್ತಿಕ ನಗರ ಇ-ಝೋನ್ ಬಳಿ | |
| | ಹೊರವರ್ತೂಲ ರಸ್ತೆ | 111 | ದೇವರಬೀಸನಹಳ್ಳಿ ಜಂಕ್ಷನ್ | |
| ಮೈಕೋ ಲೇಔಟ್ | ಹೊರವರ್ತೂಲ ರಸ್ತೆ | 112 | 16ನೇ ಮುಖ್ಯರಸ್ತೆ ಜಂಕ್ಷನ್ | |
| ಉಪ್ಪಾರಪೇಟೆ | ಕೆ.ಜಿ. ರಸ್ತೆ | 113 | ಮೈಸೂರು ಬ್ಯಾಂಕ್ ವೃತ್ತ – 3 | |
| | ಸಾಗರ್ ಜಂಕ್ಷನ್ | 114 | 1 | |
| | ಎಲೈಟ್ ಜಂಕ್ಷನ್ | 115 | 1 | |
| | ಆನಂದ್ ರಾವ್ ವೃತ್ತ | 116 | 1 | |
| ಚಿಕ್ಕಪೇಟೆ | ಶಾಂತಲಾ ಜಂಕ್ಷನ | 117 | 1 | |
| | ಶಾಂತಲಾ ಜಂಕ್ಷನ | 118 | 1 | |
| | ಶಾಂತಲಾ ಜಂಕ್ಷನ್ | 119 | 1 | |
| | ಖೋಡೆ ಜಂಕ್ಷನ್ | 120 | 1 | |
| | ಸಿರ್ಸಿ ಜಂಕ್ಷನ್ | 121 | 1 | |
| | ಸಿರ್ಸಿ ಜಂಕ್ಷನ್ | 121 | 1 | |
| ಸಿಟಿ ಮಾರ್ಕೆಟ್ | ಮೈಸೂರು ರಸ್ತೆ | 123 | ಮಾರ್ಕೆಟ್ ಸರ್ಕಲ್ – 2 | |
| ಬ್ಯಾಟರಾಯನಪುರ | ನೈಸ್ ರಸ್ತೆಯ ಪ್ರವೇಶ ದ್ವಾರದ ಬಳಿ | 124 | 2 | |

| | | | | |
|---|---|---|---|---|
| ಕಾಮಾಕ್ಷಿಪಾಳ್ಯ | ಸುಮನಹಳ್ಳಿ | 125 | 1 | |
| | ಶ್ರೀಗಂಧದ ಕಾವಲು | 126 | 1 | |
| ಮಲ್ಲೇಶ್ವರಂ | ಪಾಟಾಳ್ ನಾಗರಾಜ್ ರಸ್ತೆ ಕೆ.ಬಿ. ಜಂಕ್ಷನ್ | 127 | 2 | |
| | ಮಿಲ್ ಕಾರ್ನರ್ ಜಂಕ್ಷನ್ | 128 | 2 | |
| | ಸಂಪಿಗೆ ರಸ್ತೆ 18ನೇ ಕ್ರಾಸ್ | 129 | 3 | |
| | ಮಾರ್ಗೋಸಾ ರಸ್ತೆ 18ನೇ ಕ್ರಾಸ್ | 130 | 3 | |
| | ಮಾರ್ಗೋಸಾ ರಸ್ತೆ 15ನೇ ಕ್ರಾಸ್ | 131 | 3 | |
| | ಕೆ.ಸಿ. ಜನರಲ್ ಆಸ್ಪತ್ರೆ ಜಂಕ್ಷನ್ | 132 | 4 | |
| | ನವರಂಗ್ ಜಂಕ್ಷನ್ | 133 | 4 | |
| | 19ನೇ ಮೈನ್ ಜಂಕ್ಷನ್ | 134 | 4 | |
| | ರಾಜಾಜಿನಗರ 1ನೇ ಬ್ಲಾಕ್ ಜಂ. | 135 | 4 | |
| | ಮಹಾಲಕ್ಷ್ಮಿ ಎಂಟ್ರೆನ್ಸ್ ಜಂಕ್ಷನ್ | 136 | 3 | |
| | ಡಾ: ರಾಜ್‌ಕುಮಾರ್ ರಸ್ತೆ 10ನೇ ಕ್ರಾಸ್ | 137 | 4 | |
| | 8ನೇ ಮೈನ್ 18ನೇ ಕ್ರಾಸ್ | 138 | 3 | |
| ರಾಜಾಜಿನಗರ | ಭಾಷ್ಯಂ ಸರ್ಕಲ್ | 139 | 2 | |
| | ಇ.ಎಸ್.ಐ ಜಂಕ್ಷನ್ | 140 | 4 | |
| ಯಶವಂತಪುರ | ಪೀಣ್ಯ ಫ್ಲೈಓವರ್ ಅಪ್‌ರ್‍ಯಾಂಪ್ ಬಳಿ | 141 | 1 | |
| | ತುಮಕೂರು ರೋಡ್ ಸರ್ವೀಸ್ ರಸ್ತೆ | 142 | 1 | |
| | ಯಶವಂತಪುರ ವೃತ್ತ | 143 | 1 | |
| | ಯಶವಂತಪುರ ವೃತ್ತ | 144 | 1 | |
| | ಯಶವಂತಪುರ ವೃತ್ತ | 145 | 1 | |
| | ಯಶವಂತಪುರ ವೃತ್ತ | 146 | 1 | |
| | ವಿವೇಕಾನಂದ ಪ್ರತಿಮೆ ಬಳಿ | 147 | 1 | |
| ಪೀಣ್ಯ | ಪೊಲೀಸ್ ಠಾಣೆ ಸಿಗ್ನಲ್ | 148 | 2 | |
| | ಎಸ್.ಎಂ.ಸರ್ಕಲ್ | 149 | 2 | |
| | ಹೆಸರಘಟ್ಟ ಕ್ರಾಸ್ | 150 | 1 | |
| | ಎಸ್.ಆರ್.ಎಸ್. ಜಂಕ್ಷನ್ | 151 | 2 | |
| | ಟಿವಿಎಸ್ ಕ್ರಾಸ್ | 152 | 3 | |
| | ಎನ್‌ಟಿಟಿಎಫ್ ಜಂಕ್ಷನ್ | 153 | 2 | |
| | ಬಾಗಲಗುಂಟೆ ಜಂಕ್ಷನ್ | 154 | 1 | |
| | ಎಸ್.ಬಿ.ಎಂ ಜಂಕ್ಷನ್ | 155 | 2 | |

| | | | | |
|---|---|---|---|---|
| ಜಾಲಹಳ್ಳಿ | ಗಂಗಮ್ಮ ಸರ್ಕಲ್ | 156 | 2 | |
| ವಿ.ವಿ. ಪುರಂ | ಬಸಪ್ಪ ಸರ್ಕಲ್ | 157 | 3 | |
| | ಪ್ರೊ.ಶಿವಶಂಕರ್ ವೃತ್ತ | 158 | 2 | |
| | ಬಾಳೆಎಲೆ ಜಂಕ್ಷನ್ | 159 | 2 | |
| | 5ನೇ ಮೈನ್ ಚಾಮರಾಜಪೇಟೆ | 160 | 4 | |
| | ಮಿಂಟೋ ಸರ್ಕಲ್ | 161 | 2 | |
| | ಮೆಡಿಕಲ್ ಕಾಲೇಜ್ ಜಂಕ್ಷನ್ | 162 | 1 | |
| | ಮೈನ್ ಗೇಟ್ ಕೃಂಬಿಗಲ್ ರಸ್ತೆ | 163 | 1 | |
| | ಲಾಲ್‌ಬಾಗ್ ಮೈನ್ ಗೇಟ್ | 164 | 1 | |
| | ಭಾರತ್ ಜಂಕ್ಷನ್ | 165 | 2 | |
| | ಮಿನರ್ವ ಸರ್ಕಲ್ | 166 | 3 | |
| ಬಸವನಗುಡಿ | ಲಾಲ್‌ಭಾಗ್ ವೆಸ್ಟ್‌ಗೇಟ್ ಜಂ | 167 | 4 | |
| | ನ್ಯಾಷನಲ್ ಕಾಲೇಜ್ ಜಂ | 168 | 4 | |
| | ವಿದ್ಯಾಪೀಠ ಜಂ | 169 | 2 | |
| | ಹಳ್ಳಿ ತಿಂಡಿ | 170 | 2 | |
| | ಆರ್. ವಿ. ಟಿ. ಜಂಕ್ಷನ್ | 171 | 0 | |
| | ಕೇಪಮಹಲ್ | 172 | 4 | |
| | ಯಡಿಯೂರು ಜಂಕ್ಷನ್ | 173 | 3 | |
| | ಭಾರತಿ ನರ್ಸಿಂಗ್ ಹೋಂ ಜಂ | 174 | 4 | |
| | ಡಿ.ಎಂ ಜಂಕ್ಷನ್ | 175 | 2 | |
| | ರಾಮಕೃಷ್ಣ ಆಶ್ರಮ | 176 | 4 | |
| | ಶಂಕರ ಮಠ ರಸ್ತೆ ಜಂಕ್ಷನ್ | 177 | 4 | |
| | ನೆಟ್ಟಕಲ್ಲಪ್ಪ | 178 | 4 | |
| ಜಯನಗರ | ಸೌತ್ ಎಂಡ್ ಸರ್ಕಲ್ | 179 | 4 | |
| | ಸಿಂಡಿಕೇಟ್ ಬ್ಯಾಂಕ್ ಜಂಕ್ಷನ್ | 180 | 2 | |
| | ಕೆನರಾ ಬ್ಯಾಂಕ್ ಜಂಕ್ಷನ್ | 181 | 2 | |
| | ಪುಟ್ಟಣ್ಣ ಜಂಕ್ಷನ್ | 182 | 2 | |
| | ಜಯನಗರ 4ನೇ ಮುಖ್ಯರಸ್ತೆ 27ನೇ ಅಡ್ಡರಸ್ತೆ ಜಂಕ್ಷನ್ | 183 | 4 | |
| | ರಾಜಲಕ್ಷ್ಮಿ ಜಂಕ್ಷನ್ | 184 | 2 | |
| | ಅರವಿಂದ ಜಂಕ್ಷನ್ | 185 | 4 | |
| | ಗೀತಾ ಜಂಕ್ಷನ್ | 186 | 4 | |
| | ಆರ್.ವಿ.ಡೆಂಟಲ್ ಜಂಕ್ಷನ್ | 187 | 4 | |
| | ಜೆ.ಪಿ.8ನೇ ಮುಖ್ಯರಸ್ತೆ 9ನೇ ಅಡ್ಡರಸ್ತೆ | 188 | 4 | |

| | | | | |
|---|---|---|---|---|
| | ಜಂಕ್ಷನ್ | | | |
| | ಡಾಲ್ಮಿಯಾ ಜಂಕ್ಷನ್ | 189 | 1 | |
| | ಜೆ.ಪಿ.ನಗರ 15ನೇ ಅಡ್ಡರಸ್ತೆ 24ನೇ ಮುಖ್ಯರಸ್ತೆ ಜಂಕ್ಷನ್ | 190 | 2 | |
| | ಬ್ರಿಗೇಡ್ ಮಿಲೇನಿಯಂ ಜಂಕ್ಷನ್ | 191 | 3 | |
| ಕೆ.ಎಸ್. ಲೇಔಟ್ | ಸಾರಕ್ಕಿ ರಿಂಗ್ ರಸ್ತೆ ಜಂಕ್ಷನ್ | 192 | 4 | |
| | ಕೆ.ಎಸ್.ಲೇಔಟ್ ಜಂಕ್ಷನ್ | 193 | 2 | |
| | ಕೋಣನಕುಂಟೆ ಕ್ರಾಸ್ ಜಂಕ್ಷನ್ | 194 | 3 | |
| | ಕೆ.ಎಸ್.ಐ.ಟಿ. ಕಾಲೇಜ್ ಜಂಕ್ಷನ್ | 195 | 2 | |

ಸಂಖ್ಯೆ:ಸೂ.ಫಲಕ/ಜಂಟಿಪೊ(ಸಂ)/2021

ಜಂಟಿ ಪೊಲೀಸ್ ಆಯುಕ್ತರವರ ಕಛೇರಿ,
ಸಂಚಾರ ವಿಭಾಗ, ನಂ.5, ಇನ್‌ಫೆಂಟ್ರಿ ರಸ್ತೆ,
ಬೆಂಗಳೂರು ನಗರ.
ದಿನಾಂಕ: 10ನೇ ಮೇ 2021

ರವರಿಗೆ,

ಆಯುಕ್ತರು,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಎನ್. ಆರ್. ಚೌಕ, ಬೆಂಗಳೂರುನಗರ.

ಮಾನ್ಯರೇ,

ವಿಷಯ:- ಸೂಚನಾ ಫಲಕಗಳ ವಿವರಗಳನ್ನು ಸಲ್ಲಿಸುತ್ತಿರುವ ಬಗ್ಗೆ.

*********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸಾರ್ವಜನಿಕರ ಸುಗಮ ಸಂಚಾರ ಹಾಗೂ ಮಾರಣಾಂತಿಕ ಅಪಘಾತಗಳನ್ನು ತಡೆಗಟ್ಟುವ ದೃಷ್ಟಿಯಿಂದ ಬೆಂಗಳೂರು ನಗರ ಸಂಚಾರ ವಿಭಾಗಕ್ಕೆ ಅವಶ್ಯವಿರುವ ಸೂಚನಾ ಫಲಕ(ನಿಯಂತ್ರಿತ, ಎಚ್ಚರಿಕೆ ಹಾಗೂ ಮಾಹಿತಿಯ ಚಿಹ್ನೆ)ಗಳ ಠಾಣಾವಾರು ಹಾಗೂ ಬಿ.ಬಿ.ಎಂ.ಪಿ. ವಲಯವಾರು, ವಿವರಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಸಲ್ಲಿಸಿರುತ್ತದೆ.

ಈ ಪಟ್ಟಿಯಲ್ಲಿ ನಮೂದಿಸಿರುವ ಸೂಚನಾ ಫಲಕಗಳು ನಗರ ಸಂಚಾರ ವಿಭಾಗಕ್ಕೆ ಅಪಘಾತಗಳನ್ನು ತಡೆಗಟ್ಟುವ ದೃಷ್ಟಿಯಿಂದ ತುಂಬಾ ಅವಶ್ಯಕವಾಗಿದ್ದು, ತುರ್ತಾಗಿ ಒದಗಿಸಲು ಈ ಮೂಲಕ ಕೋರಲಾಗಿದೆ.

(ಡಾ|| ಬಿ.ಆರ್. ರವಿಕಾಂತೇಗೌಡ)
ಜಂಟಿ ಪೊಲೀಸ್ ಆಯುಕ್ತರು
ಸಂಚಾರ, ಬೆಂಗಳೂರು ನಗರ.

ಪ್ರತಿಯನ್ನು ಮಾಹಿತಿಗಾಗಿ,

1. ಮುಖ್ಯ ಅಭಿಯಂತರರು, ಟ್ರಾಫಿಕ್ ಇಂಜಿನಿಯರಿಂಗ್ ಸೆಲ್, ಬಿ.ಬಿ.ಎಂ.ಪಿ, ಬೆಂಗಳೂರು ನಗರ.

ಜಂಟಿ ಪೊಲೀಸ್ ಆಯುಕ್ತರವರ ಕಛೇರಿ,
ಸಂಚಾರ ವಿಭಾಗ, ನಂ.5, ಇನ್‌ಫೆಂಟ್ರಿ ರಸ್ತೆ,
ಬೆಂಗಳೂರು ನಗರ,
ದಿನಾಂಕ: 16ನೇ ಫೆಬ್ರವರಿ, 2022.

ಬೆಂಗಳೂರು ನಗರ
ಸಂಚಾರ ಪೊಲೀಸ್

## ಸು ತ್ತೋ ಲೆ – 169

ವಿಷಯ:– ಬೆಂಗಳೂರು ನಗರ ಸಂಚಾರ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳು ನಿಯಮ ಜಾರಿ ವೇಳೆ ಅನುಸರಿಸಬೇಕಾದ ಗುಣಮಟ್ಟದ ಕಾರ್ಯ ನಿರ್ವಹಣಾ ವಿಧಾನಗಳು – (Standard Operating Procedure - SOP)

---

**ಪ್ರಾಸ್ತಾವಿಕ**

ಸಾರ್ವಜನಿಕ ಸೇವೆಗಾಗಿ ಸದಾ ಕರ್ತವ್ಯ ತತ್ಪರತೆಯಿಂದ ಕಾರ್ಯ ನಿರ್ವಹಿಸುತ್ತಾ ಇಲಾಖೆಯ ಹೆಮ್ಮೆ ಮತ್ತು ಘನತೆ ಗೌರವಗಳನ್ನು ಕಾಪಾಡುವ ಮುಖ್ಯ ಹೊಣೆ ಸಂಚಾರ ಪೊಲೀಸರ ಮೇಲಿದೆ. ರಸ್ತೆಗಳಲ್ಲಿ ಸುಗಮ ಸಂಚಾರ ಏರ್ಪಡಿಸುವುದರ ಜೊತೆಗೆ ಸಾರ್ವಜನಿಕರು ಅಪಘಾತಕ್ಕೆ ಒಳಗಾಗದಂತೆ ಕೈಗೊಳ್ಳುವ ಅನೇಕ ಕ್ರಮಗಳಲ್ಲಿ ರಸ್ತೆ ಸುರಕ್ಷತೆಗೆ ಸಂಬಂಧಪಟ್ಟಂತೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವುದರ ಜೊತೆಗೆ ಸಂಚಾರ ನಿಯಮಗಳನ್ನು ಜಾರಿ ಮಾಡುವುದರ ಮುಖೇನ ರಸ್ತೆಗಳನ್ನು ಸುರಕ್ಷತಾ ವಲಯಗಳನ್ನಾಗಿ ಪರಿವರ್ತಿಸುವ ಗುರುತರ ಜವಾಬ್ದಾರಿಯನ್ನು ಸಹ ಹೊಂದಿರುತ್ತಾರೆ. ಸಾರ್ವಜನಿಕರಿಗೆ ತಕ್ಷಣಕ್ಕೆ ಗೋಚರವಾಗುವ ಸರ್ಕಾರದ ಪ್ರಮುಖ ಅಂಗಗಳಲ್ಲಿ ಸಂಚಾರ ಪೊಲೀಸ್ ವಿಭಾಗವು ಅತ್ಯಂತ ಪ್ರಮುಖವಾದದ್ದು ಎಂಬುದನ್ನು ನಾವು ಮರೆಯಬಾರದು. ನಮ್ಮ ಪ್ರತಿಯೊಂದು ಚಟುವಟಿಕೆಗಳು ಸಾರ್ವಜನಿಕ ವಲಯದಲ್ಲಿ ಸಾಕಷ್ಟು ಪ್ರಚುರಗೊಳ್ಳುವುದರಿಂದ ನಾವುಗಳು ಜವಾಬ್ದಾರಿಯುತವಾಗಿ ವರ್ತಿಸುವ ಅಗತ್ಯತೆ ಹಿಂದೆಂದಿಗಿಂತಲೂ ಇಂದು ಆದ್ಯತೆಯನ್ನು ಪಡೆದುಕೊಳ್ಳುವುದು ಅನಿವಾರ್ಯವಾಗಿದೆ.

ಬಹಳಷ್ಟು ಹಿರಿಯ ಅಧಿಕಾರಿಗಳು, ಮಾಧ್ಯಮದವರು ಹಾಗೂ ಸಾರ್ವಜನಿಕರು ಬೆಂಗಳೂರು ನಗರ ಸಂಚಾರ ಪೊಲೀಸ್ ಅಧಿಕಾರಿ ಸಿಬ್ಬಂದಿಯವರು ರಸ್ತೆಗಳಲ್ಲಿ ಎಲ್ಲೆಂದರಲ್ಲಿ ನಿಂತು ನಿಯಮ ಜಾರಿಗಾಗಿ ಅಡ್ಡಾದಿಡ್ಡಿಯಾಗಿ ಕಾರ್ಯಾಚರಣೆಯಲ್ಲಿ ತೊಡಗುವ ಪರಿಯ ಬಗ್ಗೆ ವ್ಯಾಪಕವಾಗಿ ಟೀಕೆಗಳನ್ನು ಮಾಡುತ್ತಾರೆ. ಒಟ್ಟೊಟ್ಟಿಗೆ 5–6 ಜನ ಗುಂಪಿನಲ್ಲಿ ನಿಂತು ವಾಹನಗಳ ತಪಾಸಣೆ ಇತ್ಯಾದಿಗಳನ್ನು ಮಾಡುತ್ತಾ ಅನಾವಶ್ಯಕವಾಗಿ ಇತರೆ ಸಾರ್ವಜನಿಕರಿಗೂ ಸಹ ತೊಂದರೆ ನೀಡುವ ಪರಿಪಾಠದ ಬಗ್ಗೆ ಹಲವಾರು ದೂರುಗಳು ಬಂದಿರುತ್ತವೆ. ಈ ಹಿನ್ನೆಲೆಯಲ್ಲಿ ಕಾನೂನು ಜಾರಿ ಮಾಡುವಾಗ ಕೈಗೊಳ್ಳಬೇಕಾದ ಗುಣಮಟ್ಟದ ಕಾರ್ಯ ನಿರ್ವಹಣಾ ಕ್ರಮಗಳನ್ನು ಈ ಕೆಳಕಂಡಂತೆ ವಿವರಿಸಲಾಗಿದೆ.

**ಗುಣಮಟ್ಟದ ಕಾರ್ಯ ನಿರ್ವಹಣಾ ಕ್ರಮಗಳು:**

1. ಠಾಣಾಧಿಕಾರಿಗಳು ಪಿಎಸ್‌ಐ/ಎಎಸ್‌ಐ ರವರಿಗೆ ಒಂದು ಸಂಚಾರ ಬೀಟ್ ನಿಗದಿಪಡಿಸಬೇಕು.
2. ಬೀಟ್‌ಗೆ ನೇಮಕಗೊಂಡ ಅಧಿಕಾರಿಗಳು ಅವರಿಗೆ ನಿಯೋಜಿಸಿರುವ ಸಂಚಾರ ಬೀಟ್ ಸ್ಥಳದಲ್ಲಿಯೇ ದಂಡ ವಿಧಿಸಬೇಕು.

3. ದಂಡ ವಿಧಿಸುವಾಗ ಪಾರದರ್ಶಕತೆ ವ್ಯವಸ್ಥೆಗಾಗಿ, Bodyworn Camera ವನ್ನು ಕಡ್ಡಾಯವಾಗಿ ಧರಿಸುವುದು.
4. ಅಧಿಕಾರಿಗಳು ನಿರ್ದಿಷ್ಟ ಸ್ಥಳದಲ್ಲಿ ಪ್ರಕರಣ ದಾಖಲಿಸುವ ಮೊದಲು ನಿಸ್ತಂತು ಕೋಣೆಗೆ ಮಾಹಿತಿ ನೀಡಬೇಕು.
5. ಅಧಿಕಾರಿಗಳು ವಾಹನಗಳನ್ನು ನಿಲ್ಲಿಸುವಾಗ ಏಕಾಏಕಿ ಮಧ್ಯರಸ್ತೆಯಲ್ಲಿ ಓಡಿಹೋಗಿ ತಡೆಯುವುದು, ಅಟ್ಟಿಸಿಕೊಂಡು ಹೋಗುವುದು, ಲಾಠಿಯಲ್ಲಿ ತಡೆಯುವುದು ಮಾಡಬಾರದು.
6. ದಂಡ ವಿಧಿಸುವಾಗ ತನಗಾಗಲಿ/ಸಾರ್ವಜನಿಕರಿಗಾಗಲೀ ಪ್ರಾಣ ಹಾನಿ ಆಗುವಂತೆ ಮಾಡುವಂತಿಲ್ಲ.
7. ಸಾರ್ವಜನಿಕರೊಂದಿಗೆ ವಿಶೇಷವಾಗಿ ಹೆಂಗಸರು, ವೃದ್ಧರು, ಅಪ್ರಾಪ್ತ ಮಕ್ಕಳೊಂದಿಗೆ ಸೌಮ್ಯವಾಗಿ ವರ್ತಿಸುವುದು.
8. ದಂಡ ವಿಧಿಸುವಾಗ ಯಾವುದೇ ಆಮಿಷಕ್ಕೆ ಒಳಗಾಗದೆ ನಿಷ್ಠೆಯಿಂದ ಕೆಲಸ ನಿರ್ವಹಿಸಬೇಕು.
9. ಪ್ರತಿಯೊಬ್ಬ ಸಿಬ್ಬಂದಿಯು ನೋಟ್ ಪುಸ್ತಕ ಬರೆಯುವುದನ್ನು ಕಡ್ಡಾಯ ಮಾಡುವುದು.
10. ದಂಡ ವಿಧಿಸುವಾಗ ಆದಷ್ಟು ಸಿ.ಸಿ.ಟಿ.ವಿ.ಗಳಿರುವ ಸ್ಥಳಗಳನ್ನು ಆಯ್ಕೆ ಮಾಡುವುದು.
11. Digi Locker ಅಥವಾ e-challan, M-Parivahan ಗಳಲ್ಲಿ ತೋರಿಸಿದ ದಾಖಲೆಗಳನ್ನು ಪರಿಗಣಿಸುವುದು.
12. IMV ಕಾಯ್ದೆ ಅನುಗುಣವಾಗಿ ಸಂಚಾರ ನಿಯಮಗಳನ್ನು ಜಾರಿಗೊಳಿಸುವುದು.
13. ಸಾರ್ವಜನಿಕರಿಗೆ ಗೋಚರಿಸುವಂತೆ ನಿಂತು, ದಂಡ ವಿಧಿಸಬೇಕು ಹಾಗೂ ಯಾವುದೇ ಅಪಘಾತ ಅಥವಾ ಅವಘಡ ಸಂಭವಿಸುವುದನ್ನು ತಡೆಯುವುದು.
14. ಪಿ.ಡಿ.ಎ.ಯಂತ್ರವು ಪಿಎಸ್ಐ/ಎಎಸ್ಐ ಅಧಿಕಾರಿಗಳೊಂದಿಗೆ ಮಾತ್ರ ಇರತಕ್ಕದ್ದು.
15. ಪಾವತಿಯಾದ ದಂಡದ ಮೊತ್ತವನ್ನು ಮರುದಿನ ತಪ್ಪದೇ ಬ್ಯಾಂಕಿಗೆ ಸಂದಾಯ ಮಾಡುವುದು.
16. ವಾಹನಗಳನ್ನು ವಶಕ್ಕೆ ಪಡೆದ ಎರಡು ದಿನಗಳೊಳಗೆ ವಿಲೇವಾರಿ ಮಾಡುವುದು.
17. ಕಾರ್ಯಾಚರಣೆ ಪ್ರಭಾರ ವಹಿಸುವ ಎಲ್ಲಾ ಸಿಬ್ಬಂದಿಗಳು ಪ್ರತಿಫಲಿತ ಜಾಕೆಟ್‌ಗಳನ್ನು (ರಿಫ್ಲೆಕ್ಟೀವ್ ಜಾಕೆಟ್) ಧರಿಸಿರುವುದನ್ನು ಖಚಿತಪಡಿಸಿಕೊಳ್ಳಬೇಕು.ಈ ರೀತಿಯ ಪೊಲೀಸ್ ಸಿಬ್ಬಂದಿಯ ಗೋಚರತೆಯು ಅಪಘಾತಗಳನ್ನು ತಪ್ಪಿಸಲು ಸಹಾಯಕವಾಗುತ್ತದೆ.
18. ಸಮವಸ್ತ್ರದ ಮೇಲೆ ಎಲ್ಲರಿಗೂ ಸ್ಪಷ್ಟವಾಗಿ ಕಾಣಿಸುವಂತೆ ಹೆಸರಿನ ಫಲಕ ಮತ್ತು ಬಿಲ್ಲೆ ಸಂಖ್ಯೆಯನ್ನು ಕಡ್ಡಾಯವಾಗಿ ಪ್ರದರ್ಶಿಸಬೇಕು.
19. ಕಾರ್ಯಾಚರಣೆ ವೇಳೆ ಅಂಬ್ಯುಲೆನ್ಸ್ ವಾಹನಗಳಿಗೆ ಹಾಗೂ ತುರ್ತು ಸೇವೆಗಳಲ್ಲಿ ತೊಡಗಿಸಿಕೊಳ್ಳುವಂತ ವಾಹನಗಳ ಸಂಚಾರಕ್ಕೆ ಯಾವುದೇ ರೀತಿಯ ಅಡಚಣೆಯಾಗದಂತೆ ನೋಡಿಕೊಳ್ಳುವುದು.
20. ತಪಾಸಣೆಗೆ ಒಳಪಡಿಸುವ ಚಾಲಕ / ಸವಾರನ ಬಳಿ ಅಧಿಕಾರಿಯು ನಯವಾಗಿ ವರ್ತಿಸಿ ಪೂರ್ವಭಾವಿ ಮಾಹಿತಿ (ಹೆಸರು, ವಿಳಾಸ, ಎಲ್ಲಿಂದ ಬಂದಿರುವ ಮತ್ತು ಎಲ್ಲಿಗೆ ಹೋಗುತ್ತಿರುವ ಬಗ್ಗೆ) ಯನ್ನು ಪಡೆದುಕೊಳ್ಳಬೇಕು.
21. ಪಿ.ಡಿ.ಎ. ಯಂತ್ರದಲ್ಲಿ 2 ಪ್ರಿಂಟ್‌ಗಳ ಪ್ರತಿಗಳನ್ನು ತೆಗೆದು ಒಂದು ಪ್ರತಿಯನ್ನು ಚಾಲಕ/ಸವಾರನಿಗೆ ನೀಡಬೇಕು. ಮತ್ತೊಂದು ಪ್ರತಿಯನ್ನು ಅಧಿಕಾರಿಯು ದಾಖಲೆಗಾಗಿ ಇಟ್ಟುಕೊಳ್ಳಬೇಕು.

22. ವಾಹನವನ್ನು ವಶಕ್ಕೆ ತೆಗೆದುಕೊಳ್ಳುವಾಗ ಅಧಿಕಾರಿಯು ವಾಹನದಲ್ಲಿ ಬೆಲೆ ಬಾಳುವ ವಸ್ತುಗಳಿದ್ದರೆ ಅವುಗಳನ್ನು ಚಾಲಕ/ಸವಾರನ ವಶಕ್ಕೆ ಒಪ್ಪಿಸಬೇಕು.

23. ಕಾರ್ಯಾಚರಣೆ ವೇಳೆ ಅಗತ್ಯ ಬಿದ್ದರೆ ಕಾ ಮತ್ತು ಸು ಪೊಲೀಸರ ಸಹಕಾರವನ್ನು ಪಡೆದುಕೊಳ್ಳಲು ಕಾರ್ಯಾಚರಣೆ ಹಮ್ಮಿಕೊಳ್ಳುವ ಬಗ್ಗೆ ಮುಂಚಿತವಾಗಿಯೇ ವ್ಯಾಪ್ತಿಯ ಕಾ ಮತ್ತು ಸು ಪೊಲೀಸ್ ಠಾಣೆಗೆ ವಿಷಯವನ್ನು ತಿಳಿಸುವುದು ಒಳ್ಳೆಯ ಬೆಳವಣಿಗೆ.

24. ಕಾರ್ಯಾಚರಣೆಯನ್ನು ಸರಾಗವಾಗಿ ಸಮರ್ಥವಾಗಿ ನಡೆಸಬೇಕು. ಕಾರ್ಯಾಚರಣೆ ಸಮಯದಲ್ಲಿ ರಸ್ತೆಯಲ್ಲಿ ಸಂಚರಿಸುವ ಇನ್ನಿತರೆ ವಾಹನಗಳ ಸಂಚಾರಕ್ಕೆ ಯಾವುದೇ ರೀತಿಯಲ್ಲಿ ತೊಂದರೆಯಾಗದಂತೆ ನೋಡಿಕೊಳ್ಳುವುದು.

25. ಯಾವುದೇ ಹಂತದಲ್ಲಿ ಸನ್ನಿವೇಶವನ್ನು ನಿಭಾಯಿಸುವುದು ಅಧಿಕಾರಿಗೆ ಕಷ್ಟಕರವಾಗಿ ಕಂಡುಬಂದಲ್ಲಿ ಕೂಡಲೇ ಮೇಲಾಧಿಕಾರಿಗಳ ಗಮನಕ್ಕೆ ತಂದು ಅವರ ಮಾರ್ಗದರ್ಶನವನ್ನು ಪಡೆಯುವುದು.

26. ದಾಖಲಿಸಲು ಹಮ್ಮಿಕೊಳ್ಳಲಾಗುವ ಕಾರ್ಯಾಚರಣೆಯನ್ನು ನ್ಯಾಯೋಚಿತ, ಪಾರದರ್ಶಕ ಮತ್ತು ಸರಿಯಾದ ರೀತಿಯಲ್ಲಿ ನಡೆಸಬೇಕು. ಕಾರ್ಯಾಚರಣೆ ವೇಳೆ ಯಾವುದೇ ಪಕ್ಷಪಾತವಾಗಲೀ ಅಥವಾ ತಮ್ಮದೇ ಆದ ಪದ್ಧತಿಯನ್ನು ಅಳವಡಿಸಿಕೊಳ್ಳಬಾರದು. ಎಲ್ಲವೂ ಕಾನೂನು ಬದ್ಧವಾಗಿಯೇ ಇರಬೇಕು.

27. ನಿಯಮ ಜಾರಿ ಮಾಡುವಾಗ ಸಂಚಾರ ವಿಭಾಗದ ಅಧಿಕಾರಿ ಸಿಬ್ಬಂದಿಯವರ ಜೊತೆ ಅನುಚಿತವಾಗಿ ವರ್ತಿಸುವುದು, ಅಸಭ್ಯವಾಗಿ ಮಾತನಾಡುವುದು ಮುಂತಾದ ಅನುಚಿತ ವರ್ತನೆಯ ವಿರುದ್ಧ ಸಂಬಂಧಪಟ್ಟ ಸರಹದ್ದಿನ ಕಾನೂನು ಮತ್ತು ಸುವ್ಯವಸ್ಥೆ ಠಾಣೆಯಲ್ಲಿ ಪ್ರಕರಣವನ್ನು ದಾಖಲಿಸುವುದು.

(ಡಾ. ಬಿ.ಆರ್. ರವಿಕಾಂತೇಗೌಡ)
ಜಂಟಿ ಪೊಲೀಸ್ ಆಯುಕ್ತರು
ಸಂಚಾರ, ಬೆಂಗಳೂರು ನಗರ.

ಗೆ,

ಬೆಂಗಳೂರು ನಗರದ ಎಲ್ಲಾ ಸಂಚಾರ ಪೊಲೀಸ್ ಇನ್ಸ್‌ಪೆಕ್ಟರ್‌ಗಳಿಗೆ.

ಪ್ರತಿಗಳನ್ನು:

1. ಉಪ ಪೊಲೀಸ್ ಆಯುಕ್ತರು, ಸಂಚಾರ ಪೂರ್ವ, ಪಶ್ಚಿಮ ಮತ್ತು ಉತ್ತರ ವಿಭಾಗ ಬೆಂಗಳೂರು ನಗರ.
2. ಎಲ್ಲಾ ಸಹಾಯಕ ಪೊಲೀಸ್ ಆಯುಕ್ತರು, ಸಂಚಾರ ಉಪ ವಿಭಾಗಗಳು, ಬೆಂಗಳೂರು ನಗರ.

<u>ಪ್ರತಿಯನ್ನು ಅಭಿನಂದನೆಗಳೊಂದಿಗೆ:</u> ಪೊಲೀಸ್ ಆಯುಕ್ತರು, ಬೆಂಗಳೂರು ನಗರ.